ಎಸ್.ಸಿ.ಎಸ್.ಟಿ.ಜನಾಂಗದ ನಿವೇಶನ ರಹಿತರಿಗೆ ಭೂ ಒಡೆತನ ಯೋಜನೆ

1102 (1216) ಶ್ರೀ ಸುಣಗಾರ ಶರಣಪ್ಪ ತಿಪ್ಪಣ್ಣ (ಸಿಂಧಗಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧಗಿ ಪಟ್ಟಣದಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಜನಾಂಗದವರ ಸಂಖ್ಯೆ ಎಷ್ಟು (ಪ್ರತ್ಯೇಕ ವಿವರ ಒದಗಿಸುವುದು)

ಆ) ಇವರ ಪೈಕಿ ವಸತಿ ರಹಿತರ ಸಂಖ್ಯೆ ಎಷ್ಟು?

ಇ) ಇವರಿಗೆ ವಸತಿ ಸೌಲಭ್ಯ ಒದಗಿಸಲು ಸರ್ಕಾರವು ತೆಗೆದುಕೊಳ್ಳಲಿರುವ ಕ್ರಮಗಳು ಯಾವುವು?

ಈ) ಸಿಂಧಗಿ ಪಟ್ಟಣದಲ್ಲಿ ಎರಡು ವರ್ಷಗಳಲ್ಲಿ ಪರಿಶಿಷ್ಟ ಜಾತಿ : ವರ್ಗಗಳ ಅಭಿವೃದ್ಧಿ ನಿಗಮದ ಭೂ ಒಡೆತನ ಯೋಜನೆ ಅಡಿಯಲ್ಲಿ ಎಷ್ಟು ಎಕರೆ ಜಮೀನು ಖರೀದಿಸಲಾಗಿದೆ (ವಿವರ ನೀಡುವುದು)

ಉ) ಸಿಂಧಗಿ ಮತಕ್ಷೇತ್ರದಲ್ಲಿ ಅತಿ ಕಡಿಮೆ ಜಮೀನು ಖರೀದಿಸಿರುವುದಕ್ಕೆ ಕಾರಣಗಳೇನು?

ಊ) ಸದರಿ ಯೋಜನೆ ಅಡಿಯಲ್ಲಿ ಹೆಚ್ಚು ಜಮೀನು ಖರೀದಿಸಿ ಪರಿಶಿಷ್ಟರಿಗೆ ಹಂಚುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಸಿಂಧಗಿ ಪಟ್ಟಣದಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಜನಸಂಖ್ಯೆ ಈ ಕೆಳಕಂಡಂತಿದೆ ಪರಿಶಿಷ್ಟ ಜಾತಿ 2268 ಪರಿಶಿಷ್ಟ ವರ್ಗ 52

ಆ) ಮಾಹಿತಿ ಲಭ್ಯವಿರುವುದಿಲ್ಲ.

ಇ) ಪರಿಶಿಷ್ಟಜಾತಿವರ್ಗದವರಿಗೆ ಅಂಬೇಡ್ಕರ್, ಆಶ್ರಯ ಮತ್ತು ಇಂದಿರಾ ಆವಾಜ್ ಯೋಜನೆಯಡಿ ವಸತಿಗಳನ್ನು ಹಂಚಿಕೆ ಮಾಡಲಾಗುತ್ತಿದೆ.

ಈ) ಸಿಂಧಗಿ ಪಟ್ಟಣದಲ್ಲಿ ಎರಡು ವರ್ಷಗಳಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ : ವರ್ಗಗಳ ಅಭಿವೃದ್ಧಿ ನಿಗಮದಿಂದ ಭೂ ಒಡೆತನ ಯೋಜನೆಯಡಿಯಲ್ಲಿ ಜಮೀನು ಖರೀದಿಸಿರುವುದಿಲ್ಲ. ಆದರೆ ಸಿಂಧಗಿ ತಾಲ್ಲೂಕಿನಲ್ಲಿ 1998-99 ಮತ್ತು 1999-2000 ನೇ ಸಾಲಿನಲ್ಲಿ ಒಟ್ಟು 159.11 ಎಕರೆ ಜಮೀನು ಖರೀದಿಸಲಾಗಿದ್ದು, 74 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

ಉ) 1998-99 ರಲ್ಲಿ ಬಿಜಾಪುರ ಜಿಲ್ಲೆಗೆ (ಅವಿಭಾಜ್ಯ ಜಿಲ್ಲೆ) 350 ಗುರಿ ಇದ್ದು ಸಿಂಧಗಿ ತಾಲ್ಲೂಕಿನಲ್ಲಿ 60 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ. 1999-2000 ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಗೆ (ವಿಭಜಿತ ಜಿಲ್ಲೆ 140 ಗುರಿ ಇದ್ದು, ಸಿಂಧಗಿ ತಾಲ್ಲೂಕಿನಲ್ಲಿ 14 ಫಲಾನುಭವಿಗಳಿಗೆ ಜಮೀನು ನೀಡಿದೆ. ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನಕ್ಕೆ ತಕ್ಕಂತೆ ಗುರಿ ನಿಗದಿಪಡಿಸಿಕೊಂಡು ಸಾಧನೆ ಮಾಡಲಾಗಿದೆ.

ಊ) ಆಯವ್ಯಯದಲ್ಲಿ ಹೆಚ್ಚಿನ ಅನುದಾನ ಅವಲಂಬಿಸಿ ಹೆಚ್ಚಿನ ಜಮೀನು ಖರೀದಿಸಲಾಗುವುದು.